ಸುತ್ತ ಕಟ್ಟೆಯನ್ನು ಕಟ್ಟಿಸಲಾಗುತ್ತಿದೆ ಹಾಗೂ ಅಂತಹ ಕೊಳವೆ ಬಾವಿಗಳ ಸುತ್ತಾ ಇದ್ದ ಗಿಡ ಗಂಟೆ ಗಳನ್ನು ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊಳವೆ ಬಾವಿಗಳಿಗೆ ಕ್ಲೋರಿನೇಟರುಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಕ್ಲೋರೊಸ್ಕೋಪ್ ಗಳನ್ನು ಖರೀದಿ ಮಾಡಲು ಪುರಸಭಾ ಆಯುಕ್ತರಿಗೆ ಆದೇಶ ನೀಡಲಾಗಿದೆ. ರೋಗರುಜಿನಗಳನ್ನು ಹತ್ತಿಕ್ಕಲು ಎಲ್ಲ ವಿಧವಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ ಎಚ್. ಪಾಟೀಲ್.—ತಾವು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದೀರಿ ಸಂತೋಷ ತುಂಗಭದ್ರಾ ಯೋಜನೆಗೆ ೯೪೦ ಲಕ್ಷ ರೂಪಾಯಿಗಳ ಅಂದಾಜು ಇದ್ದು ಅದರಲ್ಲಿ ಕಳೆದ ೭–೮ ವರ್ಷಗಳಿಂದಲೂ ಸಹ ೧೯೩ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಈಗಾಗಲೇ ಎಲ್ ಐ ಸಿ ಯಿಂದ ೩–೪ ಕೋಟಿ ರೂಪಾಯಿಗಳನ್ನು ತಂದಿದ್ದೀರಿ. ಈ ಯೋಜನೆ ಮುಗಿಯಬೇಕಾದರೆ ೯ ಕೋಟಿ ರೂಪಾಯಿ ಗಳು ಬೇಕಾಗುತ್ತದೆ, ಆದ್ದರಿಂದ ಇದನ್ನು ಅದಷ್ಟೂ ಬೇಗ ಮುಗಿಸಿಕೊಡುತ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಈ ಯೋಜನೆ ಕೆಲಸ ತೆಗೆದುಕೊಂಡಿದ್ದಾರೆ ಅವರಿಗೆ ಕೊಡಬೇಕಾದಂಥ ಹಣ ಪ್ರಮಾಣಿಕವಾಗಿ ಕೊಟ್ಟಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇನೆ ಒಂದು ವಿಂಟಿಂಗ್ ಮಾಡಿ ಆದಷ್ಟು ಬೇಗ ಪ್ರಾಮಾಣಿಕವಾದ ಪ್ರಯತ್ನ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿ ಕುಡಿಯುವ ನೀರಿನ ಯೋಜನೆಗಳನ್ನು ಮಾಡಿದೆಯೋ ಆ ರೀತಿ ಪಟ್ಟಣಗಳಲ್ಲಿ ಏನು ನೀರಿನ ಅಭಾವ ಇದೆಯೋ ಅದನ್ನು ನಿವಾರಣೆ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಮತ್ತು ಗದಗ ಬೆಟಗೇರಿ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡಿ, ಸೂಕ್ತ ರೀತಿಯಲ್ಲಿ ಸರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್ ಮುಖ್ಯ ಮಂತ್ರಿ ಚಂದ್ರು ಅವರದು. (ಮಾನ್ಯ ಸದಸ್ಯರು ಸದನದಲ್ಲಿ ಗೈರು ಹಾಜರಾಗಿದ್ದರು) ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್ ಮಾನ್ಯ ಯಡಿಯೂರಪ್ಪನವರದ್ದು.

ಬೆಂಗಳೂರಿನ ಕಾಚರನಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರೀಕೃತ ಕಸಾಯಿ ಖಾನೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಕಾಚರಕನಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರಿಕೃತ ಕಸಾಯಿ ಖಾನೆಯನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯ ಸರ್ಕಾರ ಸ್ಥಾಪನೆ ಮಾಡಲು ಹೊರಟಿರುವುದರ ಬಗ್ಗೆ ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಪ್ರಾಣಿ ಆಹಾರ ನಿಗಮ ನಿಯಮಿತದ ವತಿಯಿಂದ ಬೆಂಗಳೂರಿನ ಕಾಚರಕನ ಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರೀಕೃತ ಕಸಾಯಿಖಾನೆಯನ್ನು ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ, ಬೆಂಗಳೂರು ಮಹಾ ನಗರಪಾಲಿಕೆಯ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿಂದ ಸಾಲ ಪಡೆದು ರೂ ೫೯೦ ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಯೋಚಿಸಲಾಗಿದೆ.

ಈಗ ಹಾಲಿ ಬೆಂಗಳೂರು ನಗರದಲ್ಲಿ ೪ ದೊಡ್ಡ ಪ್ರಮಾಣದ ಕಸಾಯಿ ಖಾನೆಗಳು ಬೆಂಗಳೂರು ಪ್ರಾಣಿ ಆಹಾರ ನಿಗಮದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳು ಬೆಂಗಳೂರು ನಗರದ ಫ್ರೇಸರ್ ಟೌನಿನ ಟ್ಯಾನರಿ ರಸ್ತೆಯಲ್ಲಿ, ಸಿಟಿ ಮಾರ್ಕೆಟ್ ಸಮೀಪದ ನರಸಿಂಹರಾಜ ರಸ್ತೆಯಲ್ಲಿ, ಯಶವಂತಪುರ ಹಾಗೂ ಬೆನ್‌ಸನ್ ಟೌನ್‌ನಲ್ಲಿ ಇರುತ್ತದೆ. ಈ ಕಸಾಯಿ ಖಾನೆಗಳನ್ನು ಸುಮಾರು ೫೦ ವರ್ಷಗಳ ಹಿಂದೆ ಬೆಂಗಳೂರು ನಗರಸಭೆಯು ಸ್ಥಾಪಿಸಿರುತ್ತದೆ. ಆಗ ಬೆಂಗಳೂರು ನಗರದ ಜನಸಂಖ್ಯೆ ೨ ಲಕ್ಷಗಳಿಗೂ ಕಡಿಮೆ ಇತ್ತು. ಈ ಕಸಾಯಿ ಖಾನೆಗಳು ನಗರದ ಮಧ್ಯದಲ್ಲಿದ್ದು ಇಕ್ಕಟ್ಟಿನ ಜಾಗದಲ್ಲಿ ಅನಾರೋಗ್ಯಕರವಾದ ವಾತಾವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಮನಗಂಡು ಸರ್ಕಾರವು

ಬೆಂಗಳೂರಿನ ಈಗಿನ ಜನ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಮಾಂಸಾಹಾರಿಗಳಿಗೆ ಶುಚಿಯಾದ ಮಾಂಸವನ್ನು ಒದಗಿಸುವ ಹಾಗೂ ಆರೋಗ್ಯಕರವಾದ ವೈಜ್ಞಾನಿಕ ರೀತಿಯಲ್ಲಿ ಮಾನವೀಯ ರೀತಿಯಿಂದ ಪ್ರಾಣಿಗಳನ್ನು ವಧೆ ಮಾಡಲು ಅನುವಾಗುವಂತೆ ಒಂದು ಆಧುನಿಕ ಕಸಾಯಿ ಖಾನೆಯನ್ನು ಬೆಂಗಳೂರು ಪ್ರಾಣಿ ಆಹಾರ ನಿಗಮ ನಿಯಮಿತದ ಮುಖೇನ ಸುಮಾರು ೫೮೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಸರ್ಕಾರವು ಒದಗಿಸಿರುವ ಕಾಚರಕನಹಳ್ಳಿ ಕೆರೆ ಅಂಗಳದ ೫೭.೨೬ ಎಕರೆ ಪ್ರದೇಶದಲ್ಲಿ ನಿರ್ಮಿಸಲು ಅವಶ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು, ಕಾಚರಕನಹಳ್ಳಿಯಲ್ಲಿ ಕೇಂದ್ರ ಸರ್ಕಾರದ ನಿರಪಿನೊಂದಿಗೆ ರಾಜ್ಯ ಸರ್ಕಾರವು ಕಸಾಯಿ ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಹೊರಟಿದೆ. ಇದರಿಂದ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆತರತಕ್ಕಂಥ ಕೆಲಸವಾಗುತ್ತದೆ. ಪ್ರತಿ ದಿವಸ ಇಲ್ಲಿಳ ಸಾವಿರ ಹಸುಗಳನ್ನು ಕೊಲೆ ಮಾಡಲಾಗುತ್ತದೆ. ಸ್ವಾಮಿ, ರೈತರುಗಳು ಗೋವುಗಳನ್ನು ಗೋಮಾತೆಯೆಂದು ಪೂಜಿಸುತ್ತಾರೆ. ಇಂಥ ಧಾರ್ಮಿಕ ಭಾವನೆಗೆ ಧಕ್ಕೆತರತಕ್ಕಂಥ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ಹೊರಟಿದೆ ಎರಡನೆಯದಾಗಿ ಹೇಳುವುದಾದರೆ, ಕೇರಳಾ ರಾಜ್ಯ, ಮಹಾರಾಷ್ಟ್ರ, ಹರಿಯಾಣ ರಾಜ್ಯಗಳಲ್ಲಿ ಈ ರೀತಿಯಾದ ಒಂದು ಕಸಾಯಿ ಖಾನೆಯನ್ನು ಪ್ರಾರಂಭ ಮಾಡಲು ಅಲ್ಲಿನ ಸರ್ಕಾರಗಳು ಪ್ರಯತ್ನ ಪಟ್ಟಾಗ ಅಲ್ಲಿನ ಮಹಾಜನತೆ ಪ್ರತಿಭಟನೆಯನ್ನು ಮಾಡಿ ಕಸಾಯಿಖಾನೆ ಪ್ರಾರಂಭ ಮಾಡದಂತೆ ನೋಡಿಕೊಂಡರು. ೧೯೬೯ನೇ ಇಸವಿಯಲ್ಲಿ ಹರಿಯಾಣ ರಾಜ್ಯದ ಕುರುಂಡಲಗಿ ಎಂಬಲ್ಲಿ ಈ ಕಸಾಯಿಖಾನೆಯನ್ನು ಮಾಡಬೇಕೆಂದು ಅಲ್ಲಿನ ಸರ್ಕಾರ ಹೊರಟಿತ್ತು. ಆದೇ ರೀತಿಯಲ್ಲಿ ಕೇರಳಾ ರಾಜ್ಯದಲ್ಲೂ ಇತ್ತೀಚೆಗೆ ಈ ತರಹದ ಕಸಾಯಿಖಾನೆಯನ್ನು ಮಾಡಬಾರದೆಂದು ಜನರು ಸರ್ಕಾರವನ್ನು ಒತ್ತಾಯ ಮಾಡಿದರು. ಈಗಾಗಲೇ ನಮ್ಮ ರಾಷ್ಟ್ರದಲ್ಲಿ ಗೋವುಗಳ ಸಂಪತ್ತು ಕಡಿಮೆಯಾಗಿದೆ. ಸರ್ಕಾರವೇ ಇಂಥಾ ಕಸಾಯಿಖಾನೆಯನ್ನು ಮಾಡುವುದಕ್ಕೆ ಹೊರಟಿರುವುದು ಖಂಡನೀಯವಾದುದು. ಈಗಾಗಲೇ ಸಾವಿರಾರು ಮಠಾಧಿಪತಿಗಳು, ಸಾವಿರಾರು ಸಂಘ ಸಂಸ್ಥೆಗಳು ಸಾರ್ವಜನಿಕ ಸಭೆಗಳನ್ನು ಮಾಡಿ ಈ ರೀತಿಯಾದ ಕಸಾಯಿಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡುತ್ತಿದ್ದಾರೆ. ಈ ಪ್ರತಿಭಟನೆಗಳನ್ನು ಇಲ್ಲಿನ ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ ಕಸಾಯಿಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಹೋದರೆ ರಾಜ್ಯದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗುತ್ತದೆಂದು ಈ ಮೂಲಕ ನಾನು ತಿಳಿಸುತ್ತೇನೆ. ಜನರುಗಳಿಗೆ ಶುಚಿಯಾದ ಮಾಂಸವನ್ನು ಕೊಡುವುದಕ್ಕೋಸ್ಕರ ಈ ಕಸಾಯಿಖಾನೆಯನ್ನು ಮಾಡಲಾಗುತ್ತಿದೆ ಎಂದು ಹೇಳುತ್ತಿರುವುದು ದುರುದ್ದೇಶದಿಂದ ಕೂಡಿರುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಇರುವ ಕಸಾಯಿಖಾನೆಗಳಲ್ಲಿ ಎಳೆ ವಯಸ್ಸಿನ ಹೋರಿಗಳನ್ನು, ಕರುಗಳನ್ನು ಕೊಲೆ ಮಾಡುತ್ತಿದ್ದಾರೆ. ಸಣ್ಣ ಕರುಗಳ ಚರ್ಮವನ್ನು ಸುಲಿದು ಮಾರುವಂತಹ ಕೆಲಸವನ್ನು ಮಾಡುತ್ತಿದ್ದಾರೆ, ಸರ್ಕಾರ ಮಾಡುವುದಕ್ಕೆ ಹೊರಟಿರುವ ಈ ಕಸಾಯಿ ಖಾನೆ ನಮ್ಮ ಕರ್ನಾಟಕ ರಾಜ್ಯಕ್ಕೆ ಅಗತ್ಯ ಇಲ್ಲ. ಕೇರಳಾ, ಮಹಾರಾಷ್ಟ್ರ, ಹರಿಯಾಣ ರಾಜ್ಯಗಳಲ್ಲಿ ಅಲ್ಲಿನ ಜನರ ಪ್ರತಿಭಟನೆಗೋಸ್ಕರ ಕಸಾಯಿಖಾನೆಯನ್ನು ಪ್ರಾರಂಭ ಮಾಡಲಿಲ್ಲ. ನಮ್ಮ ರಾಜ್ಯ ಸರ್ಕಾರವು ಏನಾದರು ಪ್ರತಿಷ್ಠೆ ಮಾಡಿಕೊಂಡು ಈ ಕಸಾಯಿ ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ರಾಜ್ಯದಲ್ಲಿ ಇನ್ನೊಂದು ಅಶಾಂತ ವಾತಾವರಣ ನಿರ್ಮಾಣವಾಗುತ್ತದೆ. ಆದಕ್ಕೋಸ್ಕರ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿ ಕಸಾಯಿಖಾನೆಗೆ ೧೦–೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಅಗತ್ಯ ಇಲ್ಲ. ಇದರ ಬಗ್ಗೆ ದಯಮಾಡಿ ಸರ್ಕಾರ ಆಶ್ವಾಸನೆ ಕೊಡಬೇಕು.

ಈ ಕಸಾಯಿಖಾನೆ ದನಕರುಗಳ ಮಾಂಸದ ರುಚಿ ನೋಡುವುದಕ್ಕೋಸ್ಕರವಾಗಿ ಪ್ರಾರಂಭ ವಾಗುತ್ತಾ ಇದೆ. ಇದರಿಂದ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಡಿ. ಟಿ. ಜಯಕುಮಾರ್‌ರವರೇ, ಈ ಗಮನಸೆಳೆಯುವ ಸೂಚನೆಗೆ ತಾವೂ ಸಹ ಸಹಿ ಮಾಡಿದ್ದೀರಿ, ಈಗ ತಾವೂ ಸಹ ಮಾತನಾಡಬಹುದು.

ಶ್ರೀ ಡಿ. ಟಿ. ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಈ ಅತ್ಯಾಧುನಿಕ ಯಾಂತ್ರಿಕೃತ ಕಸಾಯಿ ಖಾನೆಯು ಮೂಲಕ ಗೋಹತ್ಯೆ ಮಾಡತಕ್ಕಂಥಾದ್ದು ನಾವೆಲ್ಲರೂ ನಾಚಿಕೆ ಪಡತಕ್ಕಂಥ ವಿಚಾರ ಎಂದ ನಾನು ಭಾವಿಸುತ್ತೇನೆ, ಇದರಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಬರತಕ್ಕಂಥ ಸಂದರ್ಭ

ಇದೆ. ಕೇರಳ ಮಹಾರಾಷ್ಟ್ರ, ಗುತ್ತು ಶಂಧ್ರಪ್ರದೇಶಗಳವರು ಈ ಕಸಾಯಿಖಾನೆಯಂ ತಮ್ಮ ತಮ್ಮ ರಾಜ್ಯದಲ್ಲಿ ಬೇಡ ಎಂದು ತಿರಸ್ಕರಿಸಿದ್ದಾರೆ, ಅವರು ಮಾಡಲು ಸಿದ್ಧರಿರದಂಥ ಗೋಹತ್ಯೆಯ ಕೆಲಸಕ್ಕೆ ನಮ್ಮ ರಾಜ್ಯದವರು ತಯಾರಾಗಿ ಪಾಪವನ್ನು ಕಟ್ಟಿಕೊಳ್ಳಬೇಕೆ? ಇಂಥ ಒಂದು ಕಸಾಯಿಖಾನೆಯನ್ನು ಮಾಡುವುದರ ಮೂಲಕ ಗೋಹತ್ಯೆಗೆ ಪ್ರೋತ್ಸಾಹಿಸಿದಂತಾಗಿ ಹಿಂದೂ ಸಂಸ್ಕೃತಿಗೆ ಧಕ್ಕೆ ಬರುತಕ್ಕಂಥ ಕೇಸನ್ನು, ಪಾಪದ ಕೆಲಸವನ್ನು ಕಟ್ಟಿ ಕೇಸನ್ನು ನಮ್ಮ ರಾಜ್ಯದಲ್ಲಿ ಮಾಡುವುದು ಬೇಡ. ಆ ಕಾರಣಗಳಿಗಾಗಿ ನಮ್ಮಲ್ಲಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದು ಬೇಡ ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೇ ಈ ಕಾರ್ಖಾನೆಯನ್ನು ಬೆಂಗಳೂರು ಏರ್‌ಪೋರ್ಟಿಗೆ ಸಮೀಪದ ಸ್ಥಳದಲ್ಲಿ ಮಾಡಲು ಉದ್ದೇಶಿಸಿದ್ದೀರಿ, ಹಸುಕುರಿಗಳನ್ನು ಕೊಂಡ ಸಂದರ್ಭಗಳಲ್ಲಿ ಮಾಂಸದ ವಾಸನೆ ಮತ್ತು ಮಾಂಸಕ್ಕಾಗಿ ಹದ್ದು, ಕಾಗೆಗಳನ್ನು ಆ ಏರಿಯಾದಲ್ಲಿ ಹಾರಾಡುವುದರಿಂದ ವಿಮಾನ ಅಪಘಾತ ಸಂಭವಿಸಿ ಅನಾಹುತಕ್ಕೆ ಈಡಾಗುವ ಪರಿಸ್ಥಿತಿಯೂ ಸಹ ಬರುತ್ತದೆ. ಕಾನೂನು ಪ್ರಕಾರ ಹಾಲು ಕೊಡತಕ್ಕಂಥ ಹಸುಗಳನ್ನು ವಧೆ ಮಾಡಕೂಡದು ಎಂಬ ಭಾವನೆ ಇದೆ. ಈ ವಧೆ ಮಾಡುವಾಗ ಪ್ರಾಣಿಗಳನ್ನು ಯಾವ ಲೆಕ್ಕಕ್ಕೂ ತೆಗೆದುಕೊಳ್ಳಿದೆ, ಹೆಂಗಸರುಗಳನ್ನು ಕೂಡ ವಧೆ ಮಾಡುತ್ತಾ ಇದ್ದಾರೆ, ಹಸುಗಳನ್ನು ವಧೆ ಮಾಡಬಾರದು ಬುಲ್‌ಗಳನ್ನು ಮಾತ್ರ ಮಾಡಬೇಕೆಂದು ಇದೆ. ಅಂತೆಯೇ ಹಸುಗಳಿಂದಲೇ ನಮ್ಮ ಮಕ್ಕಳು ಕುಡಿಯುವ ಹಾಲು ದೊರಕುವಂಥಾದ್ದು. ಹಾಲಿನ ಪೌಡರ್‌ಗಳನ್ನು ನಾವು ಬಳಸಿದರೂ ಕೂಡ ಅದರ ಮೂಲ ವಸ್ತು ಹಸುವಿನ ಹಾಲಿನಿಂದಲೇ ಆಗುತ್ತದೆ. ಇಂಥ ಒಂದು ಕಾಮಧೇನುವಿನ ವಧೆಯನ್ನು ನಾವು ಪ್ರೋತ್ಸಾಹಿಸಿ, ರೆಗ್ಯುಲರೈಸ್ ಮಾಡಿದರೆ, ಅದು ಒಂದಂ ರೀತಿಯಲ್ಲಿ ಹಿಂದೂ ಸಂಸ್ಕೃತಿಗೆ ಧಕ್ಕೆಯನ್ನು ಉಂಟು ಮಾಡಿದಂತಾಗುತ್ತದೆ. ಹೀಗೆ ಒಂದು ವೇಳೆ ಸರಕಾರದವರು ಮಾಡಿದ್ದೇ ಆದರೆ ರಾಜ್ಯದಲ್ಲಿ ದೊಡ್ಡ ಆಂದೋಲನಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ, ಆದಂದರಿಂದ ದಯವಿಟ್ಟು ಇಂಥ ಒಂದು ಆಧುನಿಕ ಕಸಾಯಿ ಕಾರ್ಖಾನೆಯನ್ನು ತೆರೆಯುವ ನಿರ್ಧಾರವನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಒಂದು ಕಾರ್ಖಾನೆಯು ಸ್ಥಾಪನೆಯಾದರೆ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ಬರಂತ್ತದೆ. ಅದರ ಮೂಲಕ ಚಳುವಳಿಗೆ ಮಾರ್ಗ ಮಾಡಿದ ಹಾಗೆ ಆಗುತ್ತದೆ ಎಂದು ಹೇಳಿದರು. ಅದು ಅವರ ತಪ್ಪು ತಿಳುವಳಿಕೆಯಿಂದ ಆಗಿರತಕ್ಕಂಥ ಭಾವನೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ನಾನು ನನ್ನ ಉತ್ತರದಲ್ಲಿ ಈಗಾಗಲೇ ಹೇಳಿದಂತೆ ಬೆಂಗಳೂರಿನಲ್ಲಿ ೪ ಕಡೆಗಳಲ್ಲಿ ಕಸಾಯಿ ಕಾರ್ಖಾನೆಗಳು ಇವೆ. ಅಲ್ಲಿ ಎಷ್ಟು ಪ್ರಯತ್ನ ಪಟ್ಟಾಗಲೂ ಶುಚಿತ್ವವನ್ನು ಕಾಪಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ವೈಜ್ಞಾನಿಕವಾಗಿ, ಕುರಿ, ಮೇಕೆ, ದನ ಮುಂತಾದವುಗಳನ್ನು ಕತ್ತರಿಸಲಿಕ್ಕೆ ಅಲ್ಲಿ ಸಾಧ್ಯವಾಗುತ್ತಾ ಇಲ್ಲ, ಅಲ್ಲಿ ಹಿಂಸೆ ಮೂಲಕ ಕಡಿಯುತ್ತಾ ಇದ್ದಾರೆ. ಈಗ ಹೊಸದಾಗಿ ಪ್ರಾರಂಭ ಮಾಡತಕ್ಕಂಥ ಕಸಾಯಿ ಕಾರ್ಖಾನೆಯಲ್ಲಿ ಇಂಜೆಕ್ಷನ್ ಕೊಟ್ಟು ಕತ್ತರಿಸಲಾಗುತ್ತದೆ ಹಾಗೂ ಶುಚಿತ್ವ ಕಾಪಾಡತಕ್ಕಂಥ ಒಂದು ವ್ಯವಸ್ಥೆಯೂ ಇದೆ ಎಲ್ಲಾ ಧರ್ಮಗಳವರಲ್ಲಿಯೂ ಸಹ ಮಾಂಸಾಹಾರಿಗಳು ಇದ್ದಾರೆ. ಬೆಂಗಳೂರಿನ ಈಗಿರತಕ್ಕಂಥ ವ್ಯವಸ್ಥೆಯಲ್ಲಿ ೧೭೦೦ ಕುರಿಗಳನ್ನು, ೭೫ ದೊಡ್ಡ ದನಗಳನ್ನು, ೫೦ ಹಂದಿಗಳನ್ನು ಕೊಲ್ಲುತ್ತಾ ಇದ್ದಾರೆ. ಇಷ್ಟಲ್ಲದೇ ಬೇರೆ ಬೇರೆ ರೀತಿಯಲ್ಲಿ ಕೊಲ್ಲುವಂಥ ವಿಧಾನ ಕೂಡ ಅನಧಿಕೃತವಾಗಿ ಇರಬಹುದು.

೨-೦೦ ಪಿ. ಎಂ.

ಆದರೆ ಆಧುನಿಕ ಕಸಾಯಿಖಾನೆಯನ್ನು ಮಾಡುವ ಸರ್ಕಾರದ ಪ್ರಯತ್ನದಲ್ಲಿ ೨೦೦೦ನೇ ಇಸವಿ ಹೊತ್ತಿಗೆ ದಿನಕ್ಕೆ ಎಷ್ಟು ಪ್ರಾಣಿಗಳ ಮಾಂಸಾಹಾರದ ಅವಶ್ಯಕತೆಯಿರುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಸುಮಾರು ೩ ಸಾವಿರ ಕುರಿ ಮೇಕೆಗಳನ್ನು, ೩೦೦ ದೊಡ್ಡ ಪ್ರಾಣಿಗಳನ್ನು, ೧೦೦ ಹಂದಿಗಳನ್ನು ಕೊಲ್ಲುವುದಕ್ಕೆ ಒಂದು ಯೋಜನೆಯನ್ನು ತಯಾರಿಸಲಾಗಿದೆ, ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಸಾವಿರಾರು ದನಗಳನ್ನು ಕೊಲ್ಲುವಂತೆ ವ್ಯವಸ್ಥೆ ಮಾಡುತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ, ಇದು ತಪ್ಪು ತಿಳುವಳಿಕೆಯಿಂದಾಗಿರುವಂಥದ್ದು. ಇದನ್ನು ಬಿಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವೈಜ್ಞಾನಿಕವಾಗಿ ಶುಚಿತ್ವವನ್ನು ಗಮನದಲ್ಲಿಟ್ಟುಕೊಂಡು ಮಾಂಸ ಒದಗಿಸುವುದು ಹೇಗೆ ಎಂಬ ಬಗ್ಗೆ ಕೇಂದ್ರದ ನೆರವನ್ನು ಪಡೆದು ರಾಜ್ಯ ಸರ್ಕಾರ ಇದನ್ನು ಮಾಡುತ್ತಿದೆ. ಅಮೇಲೆ

ಶ್ರೀ ಜಯಕುಮಾರ್ ಅವರು ಏರ್‌ಪೋರ್ಟ್ ಹತ್ತಿರ ಇದು ಬರುತ್ತದೆ ಎಂದು ಹೇಳಿದರು, ನಾವು ಈಗಾಗಲೇ ಅಂಥಾ ಎಲ್ಲ ಸಂಸ್ಥೆಗಳಿಂದ ಪರವಾನಿಗೆಯನ್ನು ಪಡೆದಿರುತ್ತೇವೆ. ಗೋಹತ್ಯೆ ಮಾಡಬಾರದೆಂಬ ಕಾನೂನು ಇದೆ, ಅದು ಮುಂದುವರೆಯುತ್ತದೆ, ಅದರ ಬಗ್ಗೆ ಆತಂಕ ಬೇಡ. ಸಾವಿರಾರು ದನಗಳನ್ನು ಕೊಲ್ಲುವುದಕ್ಕೆ ಈ ಕಸಾಯಿಖಾನೆ ಕಟ್ಟುತ್ತಿಲ್ಲ. ಆದ್ದರಿಂದ ರಾಜ್ಯದ ಕೆಲವು ಕಡೆ ಇದರ ವಿರುದ್ಧ ಸತ್ಯಾಗ್ರಹ ನಡೆಯುತ್ತಿರುವ ಸುದ್ದಿ ಬರುತ್ತಿದೆ, ನಾನು ಅವರಿಗೆಲ್ಲರಿಗೂ ಅದನ್ನು ನಿಲ್ಲಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ—ಈಗಿರುವಂತೆ ಕಾನ್‌ಸ್ಟಿಟ್ಯೂಷನ್ನಿನ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಪ್ರಕಾರ ಇರುವ ಕಾಮನ್ ಸಿವಿಲ್ ಕೋಡ್‌ನಂತೆ ಗೋಹತ್ಯೆಯನ್ನು ಬ್ಯಾನ್ ಮಾಡಬೇಕೆಂದು ಸ್ಪಷ್ಟವಾಗಿ ಒಪ್ಪಿಕೊಂಡಿರುವ ವಿಚಾರವಾಗಿದೆ. ಮಹಾತ್ಮ ಗಾಂಧಿಯವರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ಜನ ನಾವು ಇಂತಹ ಕೆಲಸ ಮಾಡಿದರೆ ಇದನ್ನು ಏನೆನ್ನಬೇಕು ? ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವುಂಟಾಗುತ್ತದೆಂಬ ಅಂಶಕ್ಕೆ ಬೆಲೆಯೇ ಇಲ್ಲವೇ? ಇಂಜೆಕ್ಷನ್ ಕೊಟ್ಟು ನೋವು ಉಂಟಾಗದಂತೆ ಪ್ರಾಣಿ ಹತ್ಯೆ ಮಾಡುತ್ತೇವೆಂದು ಹೇಳುತ್ತೀರಲ್ಲ, ಇದೇ ಯೋಜನೆಯನ್ನು ಕೇರಳದಲ್ಲಿ ದಹಲಿಯಲ್ಲಿ, ಹರ್ಯಾಣದಲ್ಲಿ ಮತ್ತೆಲ್ಲ ರಾಜ್ಯಗಳಲ್ಲಿ ಕೇಂದ್ರ ಹಣ ಕೊಡಲು ಮುಂದೆ ಬಂದರೂ ಅವು ನಿರಾಕರಿಸಿ ಕಸಾಯಿಖಾನೆ ತೆಗೆಯಲು ಒಪ್ಪದಿರುವ ಸಂದರ್ಭದಲ್ಲಿ ನೀವು ಏಕೆ ಇದನ್ನು ತಲೆಗೆ ಕಟಿಕೊಳ್ಳುತ್ತಿದ್ದೀರಿ ಎಂದು ನಾನು ಕೇಳುವುದು. ನಾನು ಕೇಳುವುದು ಕೋಟ್ಯಾಂತರ ಹಿಂದೂಗಳು ಪೂಜಿಸುವ ಗೋಮಾತೆಯ ಹತ್ಯೆಗೆ ಅವರ ಭಾವನೆಗಳಿಗೆ ನೋವಾದರೂ ಪರವಾಗಿಲ್ಲ ಎಂದು ಹೊರಡುವುದು ಮಹಾತ್ಮ ಗಾಂಧಿ ಹೆಸರು ಹೇಳುವ ಜನತಾ ಸರ್ಕಾರಕ್ಕೆ ಹೆಸರು ತರುವಂಥಾ ಕೆಲಸವಲ್ಲ. ಇದೇ ನಿಮ್ಮ ಸರ್ಕಾರ ಮನೆಗೆ ಹೋಗಲು ಕಾರಣವಾಗಬಹುದೇ ಹೊರತು ಮತ್ತೆ ಅಧಿಕಾರಕ್ಕೆ ಬರಲು ಆಗುವುದಿಲ್ಲ, ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವ ರೀತಿಯಿಂದ ವರ್ತಿಸುತ್ತಿರುವಿರಿ? ಕೋಟ್ಯಾಂತರ ಜನಗಳ ಭಾವನೆಯನ್ನು ನೀವು ಗೌರವಿಸಬೇಕು. ಅಧಿಕಾರ ಇದೆ ಎಂದು ಜನರ ಭಾವನೆಗಳಿಗೆ ವಿರುದ್ಧವಾಗಿ ಕೆಲಸ ಮಾಡಿದರೆ ಅದರ ಬೆಲೆ ತೆರಬೇಕಾಗುತ್ತದೆ. ಆದ್ದರಿಂದ ಇದರ ಆವಶ್ಯಕತೆ ಇಲ್ಲ ಎಂದು ಧೈರ್ಯವಾಗಿ ಹೇಳಿ. ಕೋಟ್ಯಾಂತರ ಎಳೆ ಕರುಗಳನ್ನು ಕೊಲೆ ಮಾಡುತ್ತಿದ್ದಾರೆ. ಇಲ್ಲಿರುವ ಎಲ್ಲ ಶಾಸಕರೂ ಇದರ ಬಗ್ಗೆ ಮಾತಾಡದೇ ಇರಬಹುದು, ಆದರೆ ಅವರ ಅಂತಃಕರಣದಲ್ಲಿ ಇದನ್ನು ವಿರೋಧಿಸುವವರಿದ್ದಾರೆ. ಒಂದು ಕೆಲಸ ಮಾಡಿ ನಿಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಲ್ಲೇ ಜನಗಳನ್ನು ಕೇಳಿ ಜನಗಳ ಮನಸ್ಸಿನಲ್ಲಿ ಏನು ಭಾವನೆ ಇದೆ ಎಂದು. ಆದನ್ನು ಗಮನಿಸಿ ಓಟಿನ ಆಸೆಗೋಸ್ಕರ ಅಥವಾ ಇನ್ಯಾವುದೋ ಆಸೆಗೋಸ್ಕರ ಅಥವಾ ಕೇಂದ್ರದ ದುಡ್ಡಿಗೋಸ್ಕರ ಈ ಕೆಲಸ ಮಾಡಬೇಡಿ.

ದಯವಿಟ್ಟು ನಿಮ್ಮ ಸರಕಾರದ ಹಿತದೃಷ್ಟಿಯಿಂದ ಈ ರಾಜ್ಯದ ಜನತೆಯ ಭಾವನೆಗಳನ್ನು ಅರ್ಥ ಮಾಡಿಕೊಂಡು ಇದನ್ನು ಖಂಡಿತವಾಗಿ ಪ್ರಾರಂಭ ಮಾಡಬೇಡಿ. ಇದು ರಕ್ತಕ್ರಾಂತಿಗೆ ಅವಕಾಶವಾಗಬಹುದು. ಇದು ಒಂದು ದೊಡ್ಡ ಹೋರಾಟವಾಗಬಹುದಾದ ಕಾರಣ ಇದನ್ನು ಪ್ರಾರಂಭ ಮಾಡಬಾರದೆಂದು ನಾನು ಮತ್ತೊಮ್ಮೆ ಸರಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಕೃಷ್ಣ —ಮಾಂಸಾಹಾರಿಗಳು ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯವರೆಗೆ ಮಾಂಸದ ಶುಚಿತ್ವವನ್ನು ಕಾಪಾಡಿಕೊಂಡು ಅವರಿಗೆ ಶುಚಿಯಾದ ಮಾಂಸವನ್ನು ಒದಗಿಸತಕ್ಕಂಥಾದ್ದು ಸರಕಾರದ ಆದಾ ಕರ್ತವ್ಯವಾಗಿರುತ್ತದೆ. ನಾವು ಹೊಸದಾಗಿ ಕಸಾಯಿಖಾನೆಯನ್ನು ಪ್ರಾರಂಭ ಮಾಡುತ್ತಿಲ್ಲ. ಈಗಿರುವ ಕಸಾಯಿಖಾನೆಗಳು ಇವೆ ಟ್ಯಾನರಿ ರೋಡ್‌ನಲ್ಲಿ ಇದೆ ಅಲ್ಲಿಂದ ಒಂದು ಮೈಲಿ ದೂರದಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ ಅಂತಹ ಪರಿಸ್ಥಿತಿ ಇದೆ. ಅವು ೫೦ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿವೆ ಅಲ್ಲಿ ಸರಿಯಾಗಿ ಶುಚಿತ್ವವಿಲ್ಲ. ಇದೆಲ್ಲವನ್ನೂ ಗಮನಿಸಿ ಆಧುನಿಕ ರೀತಿಯಲ್ಲಿ ಪ್ರಾರಂಭ ಮಾಡಿ ಶುಚಿತ್ವವನ್ನು ಕಾಪಾಡುವುದಕ್ಕೋಸ್ಕರ ಇದನ್ನು ಮಾಡಿದ್ದೇವೆಯೇ ವಿನಃ ಗೋಹತ್ಯೆ ಮಾಡಬೇಕೆಂದು ಅಲ್ಲ. ವೈಜ್ಞಾನಿಕವಾದ ಹೊಸ ಕಸಾಯಿ ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ದುರ್ಗಾಪುರ್, ಘಾಜಿಯಾಬಾದ್, ಬಾಂಬೆ, ಮದ್ರಾಸ್, ಪೂನಾ ಮುಂತಾದ ಕಡೆಗಳಲ್ಲಿ ಸಹ ಇದನ್ನು ಮಾಡಬೇಕೆಂದು ಇದ್ದರು, ಆದರೆ ತೆಲಗುಗಂಗಾ ಪ್ರಾಜೆಕ್ಟ್ ಬರುತ್ತದೆಂದು ಅಲ್ಲಿನ ಕಾರ್ಯಾಚರಣೆ ನಿಂತಿದೆ ಅನೇಕ ರಾಜ್ಯಗಳಲ್ಲಿ ಆಧುನಿಕ ಕಸಾಯಿಖಾನೆಗಳು ಕೆಲಸ ಮಾಡುತ್ತಿವೆ. ಧಾರ್ಮಿಕ ಭಾವನೆಗಳನ್ನು ಕೆರಳಿಸತಕ್ಕಂತಹ ಕೆಲಸ ಮಾಡಬಾರದೆಂದು ನಾನು ಮನವಿ ಮಾಡುತ್ತೇನೆ. ಒಬ್ಬರ ಅಭಿಪ್ರಾಯಗಳನ್ನು ಮತ್ತೊಬ್ಬರ ಮೇಲೆ ಹೇರುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಸಸ್ಯಾಹಾರಿಗಳಲ್ಲಿ

ಅನೇಕ ಜನ ಮಾಂಸಾಹಾರಿಗಳಾಗಂತ್ತಿದ್ದಾರೆ. ಇದರಿಂದಾಗಿ ಮಾಂಸದ ಬೆಲೆ ಕೆ.ಜಿ.ಗೆ ೪೦–೫೦ ರೂಪಾಯಿಗೆ ಆಗುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.–ಈಗ ಮಾಂಸಾಹಾರಿಗಳು ಸಸ್ಯಾಹಾರಿಗಳಾಗುತ್ತಿದ್ದಾರೆ ಸಸ್ಯಾಹಾರಿಗಳು ಮಾಂಸಾಹಾರಿಗಳಾಗುತ್ತಿದ್ದಾರೆ.

ಶ್ರೀ ಯು. ಭೂಪತಿ.—ನಿಮ್ಮ ಸರಕಾರದಲ್ಲಿ ಕಾಯಿಪಲ್ಲೆ ಬೆಲೆ ಜಾಸ್ತಿಯಾಗಿದೆ ಆದುದರಿಂದಾಗಿ ಮಾಂಸಾಹಾರಿಗಳ ಸಂಖ್ಯೆ ಜಾಸ್ತಿಯಾಗಿದೆ.

ಶ್ರೀ ಕೃಷ್ಣ.—ಶುಚಿತ್ವವನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಗೋಹತ್ಯೆ ನಿಷೇದ ಕಾನೂನು ಏನು ಇದೆ ಅದರ ಪ್ರಕಾರ ಗೋಹತ್ಯೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕೆಲವರು ಸಸ್ಯಾಹಾರಿಗಳು ಇರಬಹುದು ಅವರು ಮಾಂಸಾಹಾರಿಗಳ ಮೇಲೆ ಅವರ ಭಾವನೆಯನ್ನು ಹೇರುವುದಕ್ಕೆ ಆಗುವುದಿಲ್ಲ. ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಅವರ ಭಾವನೆಗಳನ್ನಾಗಲೀ ಇಲ್ಲವೇ ಬೇರೊಬ್ಬರ ಹೆಸರಿನಲ್ಲಿಯಾಗಲೀ ಅವರ ಭಾವನೆಗಳನ್ನು ಹೇರುವುದಕ್ಕಾಗುವುದಿಲ್ಲ. ವಾಸ್ತವಾಂಶವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಎಳಿಕರು ಹಸುಗಳನ್ನು ಕಡಿಯುತಕ್ಕಂತಹ ಕೆಲಸ ನಡೆಯುತ್ತದೆ ಎಂಬ ತಪ್ಪು ಕಲ್ಪನೆಯಿಂದ ಚಳುವಳಿಯಾಗುತ್ತಿದೆ. ಗೋಹತ್ಯೆಗೆ ಇಲ್ಲಿ ಅವಕಾಶವಾಗುವುದಿಲ್ಲ ಇದನ್ನು ಮಾಡಿದ ಉದ್ದೇಶ ಮಾಂಸದ ಶುಚಿತ್ವವನ್ನು ಕಾಪಾಡಬೇಕೆಂದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನನಗೆ ಬರುವುದಿಲ್ಲ. ಜನತಾ ಸರಕಾರ ಹಿಂದೂಗಳ ಭಾವನೆಯನ್ನು ಅರ್ಥ ಮಾಡಿಕೊಳ್ಳದೆ ಓಟಿನ ಕಾರಣಕ್ಕೋಸ್ಕರ ಇಲ್ಲವೇ ಬೇರೆ ಕಾರಣಕ್ಕೋಸ್ಕರ ಲಕ್ಷಾಂತರ ಹಸಂಕರುಗಳನ್ನು ಕೊಲೆ ಮಾಡುವಂತಹ ಪ್ರಯತ್ನವನ್ನು ನಿಲ್ಲಿಸ ಬೇಕು. ಮಹಾತ್ಮಾಗಾಂಧೀಜಿಯವರ ಆದರ್ಶವನ್ನು ಮುರಿದು ಮಾಡುತ್ತಿರುವ ನಿಮ್ಮ ಸರಕಾರಕ್ಕೆ ಧಿಕ್ಕಾರವೆಂದು ಪ್ರತಿಭಟನೆ ಮಾಡಿ ನಾನು ಹೊರಗಡೆ ಹೋಗುತ್ತೇನೆ. ವಿನಾಶ ಕಾಲೇ ವಿಪರೀತ ಬುದ್ದಿ ಎಂಬಂತೆ ನಿಮ್ಮ ವಿನಾಶಕ್ಕೆ ನೀವೇ ಅವಕಾಶ ಮಾಡಿಕೊಡುತ್ತಿದ್ದೀರಿ, ಇದನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

೩. ಮಂಗಳೂರು ಹಳೆಯ ಬಂದರಿನ ಯೋಜನೆ ಅಭಿವೃದ್ಧಿ ಬಗ್ಗೆ ತೋರಿಸಿದ ನಿರ್ಲಕ್ಷ್ಯತನದಿಂದ ಉಂಟಾಗಿರುವ ಪ್ರಾಣಹಾನಿ ಮತ್ತು ಆಸ್ತಿ ನಷ್ಟದ ಬಗ್ಗೆ

ಅಧ್ಯಕ್ಷರು.–ಈಗ ಮಾನ್ಯ ಮೊಯಿಲಿಯವರು ಮತ್ತು ಶ್ರೀಮತಿ ನಾಗರತ್ನಮ್ಮ ಹಾಗೂ ಇನ್ನೂ ಮುಂತಾದವರ ಸಹಿಯಿರುವ ಕಾಲಿಂಗ್ ಅಟೆನ್‌ಷನ್ ಇದೆ. ಇದನ್ನು ೧೩ ರಂದು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ದಿನಕ್ಕೆ ಒಂದೊಂದು ಬೋಟ್ ಮುಳುಗಂತ್ತಿದೆ. ಒಂದೆ ಬೋಟ್‌ಗೆ ೪೦ ಲಕ್ಷ ರೂಪಾಯಿಯಾಗುತ್ತದೆ ಅವರಂ ನಾಳೆಯಿಂದ ಅನಿರ್ಧಿಷ್ಟ ಕಾಲ ಮುಷ್ಕರ ಮಾಡ ಬೇಕೆಂದು ಇದ್ದಾರೆ. ಅನೇಕ ಮೀನುಗಾರರು ಸಾಯುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಯು ವಹಿವಾಟು ನಿಲ್ಲುತ್ತಿದೆ.

ಅಧ್ಯಕ್ಷರು.—ನಿಯಮ ೩೩ರ ಪ್ರಕಾರ ತಮಗೆ ಅವಕಾಶ ಕೊಡುತ್ತೇನೆ. ಇಂದೇ ಪ್ರಸ್ತಾಪ ಮಾಡಿ. ತಮಗೆ ಉತ್ತರ ೧೩ನೇ ತಾರೀಖು ಸಿಗುತ್ತದೆ. ಮಾನ್ಯ ಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ಉತ್ತರ ಕೊಡುವಂಥಾದ್ದನ್ನು ೧೩ನೇ ತಾರೀಖಿಗೆ ಕೊಡಲಿ. ಆದರೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಅದರ ಗಂಭೀರತೆಯ ಮತ್ತು ತೀಪ್ರತೆಯ ವಿಚಾರವನ್ನು ನಾವು ಹೇಳಬೇಕು. ಏತಕ್ಕೆಂದರೆ ಅಲ್ಲಿ ದಿನಕ್ಕೊಂದು ಬೋಟ್ ಸಮುದ್ರದಲ್ಲಿ ಮುಳುಗು